ನಾಲೆ ನವೀಕರಣ ಕಾಮಗಾರಿ

379(666); ಶ್ರೀ ಗುರುಪಾಟೀಲ ಶಿರವಾಳ

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆ.ಬಿ.ಜೆ.ಎನ್.ಎಲ್), ಮುದಬಾಳ್ ನಾಲೆ (ಎಂ.ಬಿ.ಸಿ) ನವೀಕರಣ ಕಾಮಗಾರಿ ನಿರ್ವಹಿಸುತ್ತಿರುವ ಉಪ ಗುತ್ತಿಗೆದಾರರು ನಾಲೆಯ ಹಳೆಯ ಕೆಳ ಹಾಸಿಗೆಯನ್ನು ತೆಗೆಯದೆ ಅದರ ಮೇಲೆ ಕಾಮಗಾರಿಯನ್ನು ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮುದಬಾಳ್ (ಎಂ.ಬಿ.ಸಿ) ನಾಲೆಯ ನವೀಕರಣ 1 ರಿಂದ 07ನೇ ಕಿ.ಮೀ.ನ ಕಾಮಗಾರಿಯು ಹಿಂದೆ ಕಾಲುವೆಯಿಂದ ತೆಗೆದಂತಹ ಕಲ್ಲುಗಳನ್ನು ಹಾಕಿ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಈ ನಾಲೆಯ ನವೀಕರಣ ಕಾಮಗಾರಿಯು ಬಹಳ ಕಳಪೆ ಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದ ಮುಂದಿನ ಕ್ರಮವೇನು;

ಉ) ಈ ಕಳಪೆ ಮಟ್ಟದ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಕಾಮಗಾರಿ 25% ಹೆಚ್ಚುವರಿ ಮೊತ್ತ (weightage) ಕೊಡಲಾಗುತ್ತಿದೆಯೇ?

ಶ್ರೀ ಎಂ.ಬಿ. ಪಾಟೀಲ (ಜಲಸಂಪನ್ಮೂಲ ಸಚಿವರು)

ಅ) ಮುದಬಾಳ ಶಾಖಾ ಮುಖ್ಯ ಕಾಲುವೆಯ ನವೀಕರಣ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಮೆ: ಎ.ಕೆ.ಆರ್. ಕನ್ಸಟ್ರಕ್ಷನ್ ಲಿಮಿಟೆಡ್ ಇವರಿಗೆ ಟೆಂಡರ್ / ಅಂದಾಜು ಪತ್ರಿಕೆಯನ್ವಯ ವಹಿಸಿಕೊಡಲಾಗಿದ್ದು, ಕಾಲುವೆಯ ನಿಗದಿಪಡಿಸಿದ ಸ್ಥಳಗಳಲ್ಲಿ ಹಳೆಯ ಕೆಳ ಹಾಸಿಗೆಯನ್ನು ತೆಗೆದುಹಾಕಿ ಟೆಂಡರ್ ಸ್ಪೆಸಿಫಿಕೇಶನ್ ಅನುಸಾರ ಹಾಗೂ ಗುಣನಿಯಂತ್ರಣ ವಿಭಾಗ ಹಾಗೂ

ಮೂರನೇ ತಂಡ (Third party) ಪರೀಕ್ಷೆಗೊಳಪಡಿಸಿ ಹೊಸದಾಗಿ ಸಿ.ಸಿ. ಲೈನಿಂಗ್ ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ / ನಿರ್ವಹಿಸುತ್ತಿದ್ದಾರೆ.

ಆ) ಕಾಲುವೆಯ ಕಿ.ಮೀ. 1 ರಿಂದ 7 ರವರೆಗಿನ ನವೀಕರಣ ಕಾಮಗಾರಿಗಾಗಿ ಕಾಲುವೆಯಿಂದ ತೆಗೆದಂತಹ ಕಲ್ಲುಗಳನ್ನು ಉಪಯೋಗಿಸದೇ, ಟೆಂಡರ್ ಸ್ಪೆಸಿಫಿಕೇಶನ್ ಅನ್ವಯ ಮತ್ತು ಗುಣನಿಯಂತ್ರಣ ವಿಭಾಗ / ಮೂರನೇ ತಂಡ ತೃಪ್ತಿಕರ ಎಂದು ನೀಡಿದ ವರದಿಯನ್ನಾಧರಿಸಿ, ಜೆಲ್ಲಿ ಕಲ್ಲುಗಳನ್ನು (Metal) ಉಪಯೋಗಿಸಿ ನಿರ್ವಹಿಸಲಾಗಿದೆ / ನಿರ್ವಹಿಸಲಾಗುತ್ತಿದೆ.

ಇ) ಈ ನಾಲೆಯ ನವೀಕರಣ ಕಾಮಗಾರಿಯ ನಿರ್ಮಾಣದ ಸಮಯದಲ್ಲಿ ಟೆಂಡರ್ ಸ್ಪೆಸಿಫಿಕೇಶನ್‌ಗಳಿಗೆ ಅನುಗುಣವಾಗಿ ನಿರ್ಮಾಣ ಕಾರ್ಯ ನಡೆಯುತ್ತಿದ್ದುದ್ದರಿಂದ ಮತ್ತು ವಿವಿಧ ನಿರ್ಮಾಣ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಯೊಂದಿಗೆ ಮತ್ತು ಕಾಮಗಾರಿಯ ನಿರ್ಮಾಣದ ಹಂತದಲ್ಲಿ / ಪೂರ್ಣಗೊಂಡ ನಂತರದಲ್ಲಿ ಗುಣನಿಯಂತ್ರಣ ವಿಭಾಗದಿಂದ ಹಾಗೂ ಮೂರನೇ ತಂಡ ದಿಂದ ಪರೀಕ್ಷೆಗೊಳಪಡಿಸಿ ತೃಪ್ತಿಕರ ವರದಿಗಳನ್ನು ಆಧರಿಸಿ ನಿರ್ಮಿತ ಕಾಮಗಾರಿಯ ಐಟಂಗಳ ಬಿಲ್ಲು ಪಾವತಿಗಾಗಿ ಪರಿಗಣಿಸಲಾಗುತ್ತಿದೆ. ಒಂದು ವೇಳೆ ತೃಪ್ತಿಕರ ಗುಣನಿಯಂತ್ರಣ ವರದಿಗಳು ಬರದಿದ್ದ ಪಕ್ಷದಲ್ಲಿ ಅಂತಹ ಐಟಂಗಳನ್ನು ಗುಣಮಟ್ಟಕ್ಕೆ ತಕ್ಕಂತೆ ಮರು ನಿರ್ಮಿಸಿ ಮತ್ತೊಮ್ಮೆ ಗುಣಮಟ್ಟ ಮರುಪರೀಕ್ಷಿಸಿ ಅಂಗೀಕರಿಸಲಾಗುತ್ತಿದೆ.

ಈ) ಮೇಲಿನ (ಇ) ನಲ್ಲಿನ ಪ್ರಶ್ನೆಯ ಉತ್ತರದಲ್ಲಿ ವಿವರಿಸಿದಂತೆ ಕಳಪೆ ಮಟ್ಟದ ಕಾಮಗಾರಿಯು ಅಂಗೀಕಾರಾರ್ಹವಲ್ಲ. ಜಲ ಸಂಪನ್ಮೂಲ ಇಲಾಖೆಯ 2012–13 ಮತ್ತು 2013–14 ದರಪಟ್ಟಿಗಳಲ್ಲಿನ ಸಾಮಾನ್ಯ ಟಿಪ್ಪಣಿಯನ್ವಯ ಟೆಂಡರ್ ಒಡಂಬಡಿಕೆಯಲ್ಲಿ ಇರುವ ಅವಕಾಶದ ಅನುಸಾರ ಗುತ್ತಿಗೆದಾರರು ನಿಗದಿತ 90 ದಿನಗಳ ಕ್ಲೋಜರ್ /

ಟೆಂಡರ್ ಅವಧಿಯಲ್ಲಿ ಒಟ್ಟು ಕಾಮಗಾರಿಯ ಪ್ರತಿಶತ 90 ರಷ್ಟು ಕಾಮಗಾರಿಯ ಪ್ರಮಾಣವನ್ನು ತೃಪ್ತಿಕರವಾಗಿ ಪೂರೈಸಿದ್ದಲ್ಲಿ ನಿಗದಿತ ವೇಟೇಜನ್ನು (weightage) ನೀಡಲಾಗುವುದು.

ಇಂಡಿ ಶಾಖಾ ನಾಲೆ ನವೀಕರಣ ಕಾಮಗಾರಿಯಲ್ಲಿ ನಡೆದ ಕಳಪೆ ಕಾಮಗಾರಿ

381(668); ಶ್ರೀ ಗುರುಪಾಟೀಲ ಶಿರವಾಳ

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆ.ಬಿ.ಜೆ.ಎನ್.ಎಲ್) ವ್ಯಾಪ್ತಿಯ ಇಂಡಿ ಉಪ ಕಾಲುವೆಗಳ ನಾಲೆ ನವೀಕರಣ ಮಾಡಲು ಲಾರಸನ್ ಅಂಡ್ ಟರ್ಬೊ (Larsen and Turbo) ಕಂಪನಿಯವರಿಗೆ ವಹಿಸಿದ ಕಾಮಗಾರಿಯ ಮೊತ್ತವೆಷ್ಟು ಹಾಗೂ ವಹಿಸಿರುವ ಕಾಮಗಾರಿಯ ದೂರ ಎಷ್ಟು;

ಆ) ಈ ಕಂಪನಿಯವರಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಮಿತಿಯೇನು;

ಇ) ಈ ಕಾಮಗಾರಿಯನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲಾಗುವುದೇ;

ಈ) ಈ ಕಂಪನಿ ನಿರ್ವಹಿಸುತ್ತಿರುವ ಕಾಮಗಾರಿಗೆ ನಿಗದಿತ ಕಾಮಗಾರಿಗಿಂತ ಕಡಿಮೆ ದೂರ ಕಾಮಗಾರಿ ಮಾಡಿದ್ದರೂ ಸಹ ಕಂಪನಿಗೆ ಶೇಕಡ 25 ಹೆಚ್ಚುವರಿ ಮೊತ್ತ ಕೊಡಲಾಗುತ್ತಿದೆಯೇ?

ಶ್ರೀ ಎಂ.ಬಿ. ಪಾಟೀಲ (ಜಲಸಂಪನ್ಮೂಲ ಸಚಿವರು)

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ವತಿಯಿಂದ ಇಂಡಿ ಶಾಖ ಕಾಲುವೆ ಕಿ.ಮೀ.0.00 ರಿಂದ 64.00 (64.00 ಕಿಲೋ ಮೀಟರ್) ರವರೆಗಿನ ಆಧುನೀಕರಣ ಕಾಮಗಾರಿಯನ್ನು ಅನುಮೋದಿತ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ. ಈ ಕಾಮಗಾರಿಯನ್ನು